this girl's name was not considered for this Ekalavya award.

ಶ್ರೀ ಎಂ.ಪಿ. ಪ್ರಕಾಶ್: ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿರುವಂತೆ ನಮ್ಮ ರಾಜ್ಯ ರಾಷ್ಟ್ರಕ್ಕೆ ಗೌರವ ತರುವಂತೆ ಎಲ್ಲ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಕೂಟಗಳಲ್ಲಿ ಅವರು ಭಾಗವಹಿಸಿದ್ದಾರೆ. ಅವರನ್ನು ಏಕಲವ್ಯ ಪ್ರಶಸ್ತಿಗೆ ಪರಿಗಣಿಸುತ್ತೇವೆ. ಇದರ ಬಗ್ಗೆ ಹೆಚ್ಚಿನ ವಿವರಗಳು ಬೇಕಾಗಿರುವುದರಿಂದ ಇಲಾಖೆಯವರಿಂದ ತರಿಸಿ ನಾಳೆ ಕೊಡುತ್ತೇನೆ.

ಇ) **ವಿಷಯ : Zero Hour mentioning** ಬಗ್ಗೆ.

ಶ್ರೀ ಕೆ.ಆರ್. ರಮೇಶ ಕುಮಾರ್ (ಶ್ರೀನಿವಾಸಪುರ) : ಅಧ್ಯಕ್ಷರೇ, ನಿಮ್ಮ ಕಾರ್ಯಾಲಯದವರು ಸ್ವಲ್ಪ ತಿಳಿವಳಿಕಸ್ಥರಾಗಬೇಕು. Zero Hour mentioning ಅಂದರೆ ಏನು? ನೆನ್ನೆ ಸದನ adjourn ಆದ ಮೇಲೆ ಇವತ್ತು ಸದನ ರೀಕನ್ವೀನ್ ಆಗುವುದರೊಳಗಾಗಿ ಯಾವುದಾದರೂ important events ಹೊರಗಡೆ ನಡೆದಿದ್ದರೆ ಅದನ್ನು ಇಲ್ಲಿ ಮೆನ್ಷನ್ ಮಾಡಲು ಅವಕಾಶ ಸಿಗದೇ ಇದ್ದಾಗ ಅಜೆಂಡ ಈಗಾಗಲೇ ಹೊರಟುಬಿಟ್ಟಿದ್ದರೆ, ಬಹಳ ತುರ್ತಾಗಿರುವ ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ concerned members ಬಂದು ತಮ್ಮನ್ನು ಭೇಟಿ ಮಾಡಿ ನೋಟೀಸ್ ಕೊಡಬೇಕು. ಅಂಥವನ್ನು ಒಂದು ಲಿಸ್ಟ್ ಮಾಡಿ ಅದಕ್ಕೆ Zero Hour mentioning ಅಂತ ಹೇಳುತ್ತಾರೆ. They are matters of utmost importance. They would have occurred after the adjournment of the House in the previous evening before the reconvening of the House this morning. ನೀವು ಎಲ್ಲ ವಿಚಾರಗಳನ್ನು ಜೀರೋ ಅವರ್‌ಗೆ ಹಾಕುವುದು, I don't know what kind of assistance the Secretariat is giving to the Hon'ble Speaker. ಯಾಕೆ ನಿಮಗೆ ಅನುಭವದ ಕೊರತೆ ಇದೆಯೇ ? ಗೊತ್ತಿಲ್ಲವೇ ಮೊದಲು ಮಾಡುತ್ತಿರಲಿಲ್ಲವೇ ? The Hon'ble Minister had to get up and give a reply to this. Otherwise this matter could come up in some other way. ಹೀಗಾಗಿ ನಾವು ಸದನದ

ಸಮಯವನ್ನು ಕಳೆದುಕೊಂಡುಬಿಡುತ್ತೇವೆ. At least now you please, ಒಂದು ಸುತ್ತೋಲೆ ಮುಖಾಂತರ kindly give an advice to all the Members concerned and encourage them, ಬೆಳಿಗ್ಗೆ papers lay ಮಾಡಬೇಕಾದರೆ, the Hon'ble Parliamentary Affairs Minister was struggling. What is your Chief–Whip doing? He should have the information, as to which Minister is coming to this House, which Minister is going to that House, which Minister is not in a position to attend the House, You must have the entire information. Information must be placed before the Hon'ble Minister for Parliamentary Affairs. ಅವರವರಷ್ಟಕ್ಕೆ ಮನಸ್ಸಿಗೆ ಬಂದಂತೆ adhoc basis ಮೇಲೆ ಅಸೆಂಬ್ಲಿ ನಡೆಸಿಕೊಂಡು ಹೋಗುತ್ತೀರಾ What is this? It is very unfortunate.

ಶ್ರೀ ಜಯಪ್ರಕಾಶ್ ಹೆಗ್ಗಡೆ: ಅದರ ಜೊತೆಗೆ ಒಂದರಲ್ಲಿ ಆರಾರು ಪ್ರಶ್ನೆಗಳು, ಕೆಲವದರಲ್ಲಿ ಒಂದಕ್ಕೊಂದು ಸಂಬಂಧವಿಲ್ಲ. ಅದನ್ನು ಡಿಲೀಟ್ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಂತ್ರಿಗಳು ಉತ್ತರ ಹೇಳುವಾಗಲೂ ಉದ್ದ ಉತ್ತರ ಹೇಳಬೇಕಾಗುತ್ತದೆ.150 ಶಬ್ದಗಳ ಮಿತಿ ಇರಬಹುದು, ಅದಕ್ಕಿಂತ ಜಾಸ್ತಿ ಹಾಕಿಬಿಟ್ಟರೆ, ಕಷ್ಟವಾಗುತ್ತದೆ. ದಯವಿಟ್ಟು ಇದನ್ನೆಲ್ಲ ಕಡಿತ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ರಮೇಶಕುಮಾರರು ಎತ್ತಿರುವ ವಿಚಾರ ಎಲ್ಲ ಸದಸ್ಯರಿಗೂ ಮನವರಿಕೆಯಾಗಬೇಕು. ಶೂನ್ಯವೇಳೆಗೆ ಒಂದು ಪಾವಿತ್ರ್ಯತೆ ಇದೆ. ಸದನ ಮುಂದೂಡಲ್ಪಟ್ಟು ಮತ್ತೆ ಸೇರುವ ಮಧ್ಯದಲ್ಲಿ ಆಗಿರುವ ಬಹಳ ಮಹತ್ವದ ವಿಷಯವನ್ನು ತಮ್ಮ ಒಪ್ಪಿಗೆ ಮೇಲೆ ಎತ್ತಲು ಶೂನ್ಯವೇಳೆ ಇರುವುದು. ಆದರೆ ನಮ್ಮಲ್ಲಿ ಬಹಳ ಜನ ಯಾವಾಗಲೋ ನಡೆದದ್ದರ ಬಗ್ಗೆ ಗಮನ ಸೆಳೆಯುವ ರೀತಿ ತರುವುದು, ಸರಿಯಲ್ಲ, ಗಮನ ಸೆಳೆಯಲು ಬೇರೆ ಪ್ರಾವಿಷನ್ ಇದೆ. ಶೂನ್ಯವೇಳೆ ಬಳಸಬಾರದು. ಸಚಿವಾಲಯ ಯಾವರೀತಿ ಸಹಕಾರ ಕೊಡಬೇಕೋ ಹಾಗೇನೆ ನಾವೂ ಕೂಡ ಸಹಕಾರ ಕೊಡಬೇಕು.